ಬರಲಾರಳೆಂದೇ ದೃಢವಾಗಿ ನಂಬಿದ್ದ ಸಿದ್ಲಿಂಗನಿಗೆ ಮದುವೆ ಎಂಬುದು ಕನಸಿನ ಗಂಟಾಗಿತ್ತು. ಹಾಗಿದ್ದಾಗ್ಯೂ ಕಳೆದ ವಾರ ಹೆತ್ತಮ್ಮ ಅನ್ನಪೂರ್ಣಮ್ಮನವರ ಒತ್ತಾಸೆಯ ಮೇರೆಗೆ, ಪರಿಚಯದವರೊಬ್ಬರ ಸೂಚನೆಯಂತೆ ವಿಜಯಪುರದ ಸಂಗಯ್ಯ ಸೂಡಿ ಎಂಬ ವಕೀಲರ ಸುಪುತ್ರಿಯನ್ನು ನೋಡಲು ಅದೇ ಊರಿನ ಅವರ ಸೋದರಳಿಯನ ಮನೆಗೆ ಚಿಕ್ಕಮ್ಮನೊಂದಿಗೆ ಸಿದ್ಲಿಂಗು ಹೋದನು. ಗೌರಿ ಎಂಬ ಅಪ್ಸರೆಯನ್ನು ನೋಡಿದ ಸಿದ್ಲಿಂಗು ಅವಳ ಅನುಪಮ ಸೌಂದರ್ಯಕ್ಕೆ ಮರುಳಾಗಿ, 'ಇಂಥ ಚೆಲುವೆ ನನ್ನ ಮಡದಿಯಾಗುವಳೆ? ನನ್ನನ್ನು ಮದುವೆಯಾಗಲು ಒಪ್ಪುವಳೆ?' ಎಂದು ಪರಿಪರಿಯಾಗಿ ಯೋಚಿಸಿದನು.

ಹೊರಡುವ ಮುನ್ನವೇ ಸಿದ್ಲಿಂಗು ಹಾಡು ಹಾಡಿಸುವುದು, ಪೇಪರ್ ಓದಿಸುವುದು ಮುಂತಾದ ಹುಚ್ಚಾಟಗಳನ್ನು ಮಾಡಿಸುವುದು ಬೇಡ ಎಂದು ಖಡಾಖಂಡಿತವಾಗಿ ತಿಳಿಸಿದ್ದನಾದ್ದರಿಂದ ಯಾರೂ ಆ ಸಾಹಸ ಮಾಡಲಿಲ್ಲ. ಪರಸ್ಪರ ಒಪ್ಪಿಗೆ ಸೂಚಿಸಿದ ನಂತರದಲ್ಲಿ ಸಿದ್ಲಿಂಗು ಹುಡುಗಿಯ ಹತ್ತಿರ ತಾನು ಮಾತನಾಡಬೇಕು ಎಂದು ತಿಳಿಸಿದನು. ಉತ್ತರವಾಗಿ ಭಾವಿ ಬೀಗರು ಕೈ ಕೈ ಹೊಸಕುತ್ತಾ, ''ನಿಮ್ಮ ಹತ್ತಿರ ಒಂದು ಮುಖ್ಯವಾದ ವಿಷಯ ಹೇಳೋದಿತ್ತು. ಅದು ಏನು ಅಂತಂದ್ರೆ...'' ಎಂದು ಶುರು ಹಚ್ಕೊಂಡು, "ನಮ್ಮ ಹುಡುಗಿಗೆ ಮಾತು ಬರೋದಿಲ್ಲ. ಆದರೆ, ಅದನ್ನ ಹೇಗೆ ಹೇಳೋದು ಅಂತ ಯೋಚಿಸ್ತಾ ಇದ್ವಿ. ಹಂಗಂತ ಇದನ್ನು ನಿಮ್ಮಿಂದ ಮುಚ್ಚಿಟ್ಟು ನಿಮಗೆ ಮೋಸ ಮಾಡೋ ಉದ್ದೇಶ ಏನೂ ನಮಗಿದ್ದಿಲ್ಲ. ಸಮಯ ಬಂದಾಗ ಹೇಳಿದರಾಯ್ತು ಅಂತಾ...'' ಎಂಬುದಾಗಿ ರಾಗ ಎಳೆಯುತ್ತಾ, "ತಾವು ಒಂಚೂರು ದೊಡ್ಡ ಮನಸ್ಸು ಮಾಡಬೇಕು" ಎಂದು ವಿನಂತಿಸಿಕೊಂಡರು.

ಕನ್ಯಾಮಣಿ ಗೌರಿಯು ಮೂಕಿ ಎಂಬ ಅನಿರೀಕ್ಷಿತ ಸುದ್ದಿ ಸ್ಫೋಟದಿಂದ ತತ್ತರಿಸಿದ ಸಿದ್ಲಿಂಗು ಮತ್ತವನ ಚಿಕ್ಕಮ್ಮ ಇಬ್ಬರೂ ಕ್ಷಣಹೊತ್ತು ಸುಮ್ಮನೆ ಕುಳಿತಿದ್ದರು. ಸ್ವಭಾವತಃ ಕ್ರಾಂತಿಕಾರಿ ವಿಚಾರಗಳನ್ನು ತನ್ನ ತಲೆಯಲ್ಲಿ ತುಂಬಿಕೊಂಡಿದ್ದಂಥ ಸಿದ್ಲಿಂಗನು ಮರುಕ್ಷಣವೇ ಸಾವರಿಸಿಕೊಂಡು, 'ಪಾಪ ಹೆಣ್ಣು ಹೆತ್ತೋರ ಸಂಕಟ ನಮ್ಮಂಥ ವಿದ್ಯಾವಂತರಲ್ಲದೆ ಬೇರೆ ಇನ್ಯಾರು ಅರ್ಥಮಾಡಿಕೊಳ್ಳಬೇಕು' ಎಂದು ಯೋಚಿಸುತ್ತಲೇ ತನಗೆ ತನ್ನ ಉದಾತ್ತ ಗುಣವನ್ನು ಪ್ರದರ್ಶಿಸುವಂಥ ಅವಕಾಶ ದೊರೆತಿರುವುದಕ್ಕೆ ಸಂತಸಪಡುತ್ತಾ, ''ಗೌರಿ ಮೂಕಿ ಅಂತ ತಿಳಿದ ಮೇಲೂ ನನಗೆ ಅವಳನ್ನು ಮದುವೆಯಾಗಲು ಯಾವುದೇ ಅಭ್ಯಂತರವಿಲ್ಲ'' ಎಂದು ಗತ್ತಿನಿಂದ ನುಡಿಯುತ್ತ, ತನ್ನನ್ನು ಮದುವೆಯಾಗಲು ಗೌರಿ ಕೂಡ ಒಪ್ಪಿದ್ದಾಳೆ ಎಂಬುದನ್ನು ಎಲ್ಲರ ಮುಂದೆ ತಿಳಿಸಲಿ ಎನ್ನುವ ಅಪೇಕ್ಷೆ ವ್ಯಕ್ತಪಡಿಸಿದನು.

ಅದರಂತೆ ಗೌರಿಯು ಗುರು ಹಿರಿಯರ ಮುಂದೆ ಬಂದು, ''ತನಗೂ ಒಪ್ಪಿಗೆ'' ಎಂಬುದನ್ನು ನಸುನಗುತ್ತಾ ಸೂಚಿಸಲು ಸಿದ್ಲಿಂಗು ಅಪಾರ ಹರ್ಷಚಿತ್ತನಾಗಿ ಮರಳಿ ಮನೆಗೆ ಬಂದನು.

ಗಂಡ ಸತ್ತ ಮುಂಡೆ ಅನ್ನೋ ಕಾರಣಕ್ಕೆ ವಧುಪರೀಕ್ಷೆಗೆ ಹೋಗದಿದ್ದ ಅನ್ನಪೂರ್ಣಮ್ಮನು ಬರಲಿರುವ ಸೊಸೆ ಮೂಗಿ ಎಂದು ತಿಳಿದು ಹೊರಗೆ ದುಃಖಿಸಿ, ''ನಮ್ಮದೇನೈತವ್ವಾ! ಊರು ಹೋಗು ಅಂತೈತಿ, ಕಾಡು ಬಾ ಅಂತೈತಿ. ಮಾಡ್ಕೊಳ್ಳೋ ಮಗಾನೇ ಒಪ್ಪಿದ ಮ್ಯಾಲ ನನ್ನದೇನು?'' ಎಂದು ಹೇಳುತ್ತಾ ತನಗೆ ಸಮ್ಮತಿಯಿಲ್ಲವೆಂಬಂತೆ ನಟಿಸಿದರೂ ಒಳಗೊಳಗೇ ಸಂತೋಷಪಟ್ಟು ಸಮ್ಮತಿ ಸೂಚಿಸಿದಳು. ಯಾರೇನೇ ಹೇಳಿದರೂ ತನ್ನ ನಿರ್ಧಾರವನ್ನು ಹಟಮಾರಿಯಾದ ಸಿದ್ಲಿಂಗು ಬದಲಿಸಲಾರ ಎಂದು ತಿಳಿದಿದ್ದ ಬಂಧು ಬಾಂಧವರೆಲ್ಲ ವಿಧ ವಿಧವಾಗಿ ಆಡಿಕೊಂಡರೂ ಎದುರಿಗೆ ಮಾತ್ರ ಮೂಗಿಯನ್ನು ಮದುವೆಯಾಗುವ ಅವನ ಧೈರ್ಯವನ್ನು ಪ್ರಶಂಸಿಸಿದರು.

ಈ ಪ್ರಕಾರವಾಗಿ ನಮ್ಮ ಸಿದ್ಲಿಂಗು ಮದುವೆ ಗೌರಿಯೊಡನೆ ನಿಶ್ಚಯವಾಗಲು ತಿಳಿದ ಜನರೆಲ್ಲ ಅವನ ಔದಾರ್ಯಕ್ಕೋ, ಅದೃಷ್ಟಕ್ಕೋ ಮಾರುಹೋಗಿ, ''ಉಘೇ, ಉಘೇ'' ಎಂದರು.

★★★